ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ: 92/2011**

ಫ್ರಾಸಾ- 21 ಚಾಸಾ- 29

ಸಾಕ್ಷಿದಾರರ ಹೆಸರುಃ : ಸತ್ಯನಾರಾಯಣ

ತಂದೆಯ ಹೆಸರುಃ : ಕೆ. ಜವರೇಗೌಡ

ವಯಸ್ಸುಃ : 55 ವರ್ಷ

ಉದ್ಯೋಗಃ : ಮಾಲೀಕರು,
ಶ್ರೀ ಭಾಗ್ಯಲಕ್ಷ್ಮಿ ಮೋಟಾರ್ಸ್ ಚನ್ನರಾಯಪಟ್ಟಣ

ವಾಸಃ : ಚನ್ನರಾಯಪಟ್ಟಣ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 22-02-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಚನ್ನರಾಯಪಟ್ಟಣದಲ್ಲಿ ಶ್ರೀ ಭಾಗ್ಯಲಕ್ಷ್ಮಿ ಮೋಟಾರ್ಸ್ ಎನ್ನುವ ಸಂಸ್ಥೆಯನ್ನು ನಡೆಸುತ್ತಿದ್ದು ಸದರಿ ಸಂಸ್ಥೆಯು ಹೀರೋಹೋಂಡಾ ದ್ವಿಚಕ್ರ ವಾಹನದ ಮಾರಾಟ ಮತ್ತು ರಿಪೇರಿ ಕೆಲಸವನ್ನು ಮಾಡುತ್ತದೆ. ನಮ್ಮ ಸಂಸ್ಥೆಯಿಂದ ರಂಗಸ್ವಾಮಿ ಎನ್ನುವವರು 2008 ರಲ್ಲಿ ಸೂಪರ್ ಸ್ಪ್ಲೆಂಡರ್ ಎನ್ನುವ ದ್ವಿಚಕ್ರ ವಾಹನವನ್ನು ಖರೀದಿ ಮಾಡಿದ್ದರು. ಆ ಸಂದರ್ಭದಲ್ಲಿ ಸದರಿ ವಾಹನದ ಬೆಲೆ ರೂ.48,950/- ಇತ್ತು. ಈ ಮೇಲೆ ಹೇಳಿದಂತೆ ರಂಗಸ್ವಾಮಿಯವರು ನಮ್ಮ ಸಂಸ್ಥೆಯಿಂದ ದ್ವಿಚಕ್ರ ವಾಹನ ಖರೀದಿ ಮಾಡಿದ ಬಗ್ಗೆ ಹಾಸನ ಲೋಕಾಯುಕ್ತ ಪೊಲೀಸರು ಮಾಹಿತಿ ಕೇಳಿದ್ದರು. ಆ ಬಗ್ಗೆ ನಾನು ಲೋಕಾಯುಕ್ತ ಪೊಲೀಸರಿಗೆ ಇನ್ವಾಯ್ಸ್ ದಾಖಲೆ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ದಾಖಲೆಯು ಸಂಬಂಧಪಟ್ಟ ದಾಖಲೆಗಳನ್ನು ನಾನು

ಲೋಕಾಯುಕ್ತ ಪೊಲೀಸರ ಮುಂದೆ ಹಾಜರುಪಡಿಸಿದ ನನ್ನ ಪತ್ರವಾಗಿದ್ದು ಸದರಿ ಪತ್ರವನ್ನು ನಿಶಾನೆ ಪಿ.58 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.58(ಎ) ಎಂದು ಗುರುತಿಸಲಾಗಿದೆ. ನಿಶಾನೆ ಪಿ.58 ಪತ್ರದ ಜೊತೆಯಲ್ಲಿ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರಿಗೆ ಈ ಮೇಲೆ ಹೇಳಿದ ವಾಹನವನ್ನು ಸಿಂಡಿಕೇಟ್ ಬ್ಯಾಂಕ್ ಡಿಡಿ ಮೂಲಕ ರಂಗಸ್ವಾಮಿಯವರು ಹಣ ಪಾವತಿ ಮಾಡಿರುತ್ತಾರೆ ಎನ್ನುವ ಬಗ್ಗೆ ಮಾಹಿತಿ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಆ ರೀತಿ ನಾನು ಮಾಹಿತಿ ನೀಡಿರುವ ಬಗ್ಗೆ ಪತ್ರ ಆಗಿದ್ದು ಅದನ್ನು ನಿಶಾನೆ ಪಿ.59 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.59(ಎ) ಎಂದು ಗುರುತಿಸಲಾಗಿದೆ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಲೋಕಾಯುಕ್ತ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿ.ಜೆ.ಪಿ.ಎಸ್. ವಕೀಲರಿಂದಃ-**

ರಂಗಸ್ವಾಮಿಯವರು ನಮ್ಮ ಸಂಸ್ಥೆಯಿಂದ 2005 ರಲ್ಲಿ ಸಹ ದ್ವಿಚಕ್ರವಾಹನವನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನೀಡಿರುತ್ತೇನೆ ಎನ್ನುವ ಹೇಳಿಕೆಯಲ್ಲಿ ಈಗ ನನಗೆ ಓದಿ ಹೇಳಿದಂತೆ "ಸಿ ಎಸ್ ರಂಗಸ್ವಾಮಿಯವರು ನಮ್ಮ ಭಾಗ್ಯ ಮೋಟಾರ್ ಸರ್ವೀಸ್ ನಲ್ಲಿ ಕೆಎ-13-ಕ್ಯೂ-8626 ಹೀರೋಹೋಂಡಾ ಕಂಪೆನಿಯ ಸೂಪರ್ ಸ್ಪೆಂಡರ್ ನ್ನು ದಿನಾಂಕ 23.06.2005 ರಂದು ಸಿಂಡಿಕೇಟ್ ಬ್ಯಾಂಕ್ ಡಿಡಿಯಲ್ಲಿ ರೂ.48,8950-00 ಗಳಿಗೆ ಖರೀದಿಸಿರುತ್ತಾರೆ ಎಂದು ನಾನು ಹೇಳಿಲ್ಲ ". ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಡಿ.1 ಎಂದು ಗುರುತಿಸಲಾಗಿದೆ. ದಿನಾಂಕ 13.02.2008 ರಂದೂ ಸಹ ರಂಗಸ್ವಾಮಿಯವರು ದ್ವಿಚಕ್ರವಾಹನವನ್ನು ಸಿಂಡಿಕೇಟ್ ಬ್ಯಾಂಕ್ ನ ಡಿಡಿ ನೀಡಿ ಖರೀದಿ ಮಾಡಿದ್ದು ಎಂದರೆ ಸರಿ. ಸದರಿ ವಾಹನವನ್ನು ಬ್ಯಾಂಕ್ ಸಾಲ ಪಡೆದು ಖರೀದಿ ಮಾಡಿದ್ದು ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**